ಆ. ಹಾಗಿದ್ದಲ್ಲಿ, ಈ ಕುರಿತಂತೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ. ಬಾಗಲಕೋಟೆ ಜಿಲ್ಲೆಗೆ ಸಂಬಂಧಿಸಿದಂತೆ ಕೊಳವೆಬಾವಿಗಳ ಗುತ್ತಿಗೆದಾರರು ಹೆಚ್ಚುವರಿ ಹಣವನ್ನು ಫಲಾನುಭವಿಗಳಿಂದ ಪಡೆದ ಬಗ್ಗೆ ಎರಡು ದೂರುಗಳು ಬಂದಿವೆ. ಈ ಉದ್ದೇಶಕ್ಕಾಗಿ ವರದಿ ನೀಡಲು ನಾಮ ನಿರ್ದೇಶನಪಟ್ಟ ಅಧಿಕಾರಿಗಳು ವರದಿ ನೀಡಿ ಪರಿಶೀಲಿಸುವವರೆಗೆ ಯಾವುದೇ ಪ್ರೇರಕ ಕಾರಣಗಳು ಹೆಚ್ಚುವರಿಯಾಗಿ ಹಣ ಪಡೆದಿರುವ ಅಂಶವನ್ನು ನಿರ್ಧರಿಸಲು ಬರುವುದಿಲ್ಲ. ಈ ಬಗ್ಗೆ ಇಬ್ಬರು ಅಧಿಕಾರಿಗಳು ವಿಚಾರಣೆ ಕಾಯ್ದಿರಿಸಿ ಆಮಾನತ್ತಿನಲ್ಲಿರಿಸಿದೆ.

ಕೋಲಾರ ಜಿಲ್ಲೆಯ ಪಶುಸಂಗೋಪನಾ ಇಲಾಖೆಯಲ್ಲಿ ಅವ್ಯವಹಾರ

1815(2142): ಶ್ರೀ ಸಂಪಂಗಿ ಎನ್ (ಬಾಗೇಪಲ್ಲಿ) : ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ಕೋಲಾರ ಜಿಲ್ಲೆಯ ಪಶುಸಂಗೋಪನಾ ಇಲಾಖೆಯಲ್ಲಿ ಅವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ: ಬಂದಿದ್ದಲ್ಲಿ ಈ ನಿಟ್ಟಿನಲ್ಲಿ ಏನು ಕ್ರಮ ಜರುಗಿಸಲಾಗಿದೆ.

ಆ. ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದಲ್ಲಿರುವ ಪಶುಸಂಗೋಪನಾ ಮತ್ತು ಆಸ್ಪತ್ರೆಗಳು ಎಷ್ಟು: ವಿವರ ಒದಗಿಸುವುದು: ಇನ್ನು ಮುಂದೆ ಯಾವ ಯಾವ ಭಾಗದಲ್ಲಿ ಆಸ್ಪತ್ರೆಗಳನ್ನು ಪ್ರಾರಂಭಿಸಲಾಗುವುದು: ವಿವರ ಒದಗಿಸುವುದು.

ಇ. ಬಾಗೇಪಲ್ಲಿ ಪಶು ಆಸ್ಪತ್ರೆಗಳಲ್ಲಿ ಜಾನುವಾರುಗಳಿಗೆ ಔಷಧಿಯು ಸರಿಯಾಗಿ ಸರಬರಾಜು ಆಗದೇ ರೈತಾಪಿ ವರ್ಗದವರು ತೀವ್ರ ರೀತಿಯ ತೊಂದರೆಗೆ ಒಳಗಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದರೆ, ಯಾವ ರೀತಿಯ ಮಾರ್ಗೋಪಾಯದಿಂದ ಪರಿಹರಿಸಲಾಗುವುದು: ವಿವರ ನೀಡುವುದು?

ಶ್ರೀ ಎಂ. ಮಹದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು)

ಅ. ಇತ್ತೀಚಿಗೆ ಯಾವುದೇ ಪ್ರಕರಣವು ಗಮನಕ್ಕೆ ಬಂದಿರುವುದಿಲ್ಲ ಕೆಲವು ಹಳೆ ಪ್ರಕರಣಗಳು ವಿಚಾರಣೆಯಲ್ಲಿ ಅಥವಾ ನ್ಯಾಯಾಲಯದಲ್ಲಿ ಬಾಕಿ ಇರುತ್ತವೆ.

ಆ. ಈ ಮತಕ್ಷೇತ್ರದಲ್ಲಿ 20 ಸಂಸ್ಥೆಗಳಿರುತ್ತವೆ. (ಅನುಬಂಧ-1ರಲ್ಲಿ ವಿವರಗಳನ್ನು ನೀಡಲಾಗಿದೆ) ಹೊಸದಾಗಿ ಪಶು ಆಸ್ಪತ್ರೆಗಳನ್ನು ಪ್ರಾರಂಭಿಸುವ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

ಇ. ಇಲ್ಲ

ಉದ್ಭವಿಸುವುದಿಲ್ಲ.

ಅನುಬಂಧ

ಕ್ರ.	ಪಶು ಆಸ್ಪತ್ರೆ	ಪಶು ಚಿಕಿತ್ಸಾಲಯ	ಪ್ರಾಥಮಿಕ ಪಶು	ಸಂಚಾರಿ ಪಶು	ಕೃತಕ ಗರ್ಭ	ತಾಲ್ಲೂಕು
1.	ಬಾಗೇಪಲ್ಲಿ	1. ಸೋಮೇನಹಳ್ಳಿ	1. ಎಲ್ಲಂಪಲ್ಲಿ	1. ಬಾಗೇಪಲ್ಲಿ	1. ಬಾಗೇಪಲ್ಲಿ	ಬಾಗೇಪಲ್ಲಿ
2.	ಗುಡಿಬಂಡೆ	2. ಪಾತಪಾಳ್ಯ	2. ಕರಿಗಾನತಮ್ಮನಹಳ್ಳಿ	2. ಗುಡಿಬಂಡೆ	2. ಗುಡಿಬಂಡೆ	ಗುಡಿಬಂಡೆ
3.	ಎಲ್ಲೋಡು	3. ಗೂಳೂರು	3. ತಿರುಮಣಿ			ಗುಡಿಬಂಡೆ
		4. ಮಾರ್ಗಾನಾಕುಂಟೆ	4. ಮೇಳ್ಯ			ಬಾಗೇಪಲ್ಲಿ
		5. ತಿಮ್ಮಂಪಲ್ಲಿ	5. ಬೀಜಗಾನಹಳ್ಳಿ			ಬಾಗೇಪಲ್ಲಿ
		6. ನಗರಗೆರೆ	6. ಹಂಪಸಂದ್ರ			ಬಾಗೇಪಲ್ಲಿ
		7. ವಾಟದಹೊಸಹಳ್ಳಿ				ಬಾಗೇಪಲ್ಲಿ
						ಗೌರಿಬಿದನೂರು
						ಗೌರಿಬಿದನೂರು
						ಗುಡಿಬಂಡೆ
						ಗುಡಿಬಂಡೆ